

ವಿಜಯನಗರ ಜಿಲ್ಲೆಯ ಒಣ ಕಾಡುಗಳು ಚಿತ್ರ: ಸಂಜಯ್ ಗುಬ್ಬಿ

ಈ ಚಿರತೆಯ ಚಿತ್ರಗಳನ್ನು ನೋಡಿದ ನನ್ನ ಮನಸ್ಸಿಗೆ ಸ್ಟ್ರಾಬೆರಿ ಬಣ್ಣಕ್ಕೂ ಇದಕ್ಕೂ ಯಾವುದೇ ತಾಳಮೇಳವಿಲ್ಲ ಎಂದೆನಿಸಿತು. ಈ ರೂಪಾಂತರಕ್ಕೆ ಸ್ಥಳೀಯ ಗುರುತನ್ನು ನೀಡಲು ಮತ್ತು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹೆಸರು ಕೊಟ್ಟರೆ ಸೂಕ್ತ ಎಂದುಕೊಂಡೆ. ಆಗ ಹೊಳೆದದ್ದು 'ಚಂದನ ಚಿರತೆ' (Sandalwood Leopard) ಎಂದು. ಕರ್ನಾಟಕ ಶ್ರೀಗಂಧದ ನಾಡು ಮತ್ತು ಚಿರತೆಯ ತುಪ್ಪಳ ಕೂಡ ಶ್ರೀಗಂಧದ ಬಣ್ಣ, ಹಾಗಾಗಿ ಇದಕ್ಕೆ ಇದೇ ಸೂಕ್ತ ಹೆಸರು ಎಂದುಕೊಂಡೆ. ಚಂದನ ಚಿರತೆಯ ಬಗ್ಗೆ ಸಾರ್ವಜನಿಕವಾದೊಡನೆ ಬಹಳ ಉತ್ತಮ ಪ್ರತಿಕ್ರಿಯೆ ಬಂದಿತು. ವನ್ಯಜೀವಿ ಆಸಕ್ತರಿಗೆ, ಸಾರ್ವಜನಿಕರಿಗೆ, ಅರಣ್ಯಾಧಿಕಾರಿಗಳಿಗೆ, ಎಲ್ಲರಿಗೂ ಇದರ ಹೆಸರು ಪ್ರಿಯವಾಯಿತು. ಎಂಥಾ ಚಂದದ ಹೆಸರು ಎಂದು ಹಲವರು ವ್ಯಾಖ್ಯಾನಿಸಿದರು. ಹೆಚ್ಚಾಗಿ ವನ್ಯಜೀವಿಗಳ ಬಗ್ಗೆ ಋಣಾತ್ಮಕ ಸುದ್ದಿಗಳನ್ನೇ ಓದಿ ಬೇಸತ್ತಿದ್ದ ಜನರಿಗೆ 2026ರ ಪ್ರಾರಂಭದಲ್ಲಿ ಸಕಾರಾತ್ಮಕ ಸುದ್ದಿ ಓದಿ ಸಂತೋಷವಾಗಿತ್ತು.

ನಮ್ಮ ಕ್ಯಾಮೆರಾಗಳ ಮುಂದೆ ಒಂಟಿಯಾಗಿ ಕ್ಯಾಟ್ ವಾಕ್ ಮಾಡಿದ ಚಂದನ ಚಿರತೆ ಕೆಲ ಚಿತ್ರಗಳಲ್ಲಿ ತನ್ನ ಸುಮಾರು ಆರು ತಿಂಗಳ ಮರಿಯನ್ನು ನಮ್ಮ ಕ್ಯಾಮೆರಾ ಮುಂದೆ ಕರೆದುಕೊಂಡು ಬಂದು ಅದನ್ನು ನಮಗೆ ಪರಿಚಯಿಸಿತ್ತು. ಮರಿ ಚಿರತೆ ಸಾಧಾರಣ ಮೈ ಬಣ್ಣವನ್ನೇ ಹೊಂದಿದೆ! ಈ ಪ್ರದೇಶದಲ್ಲಿ ಸಿಕ್ಕಿರುವ ಇನ್ಯಾವುದೇ ಚಿರತೆಗೂ ಚಂದನ ಬಣ್ಣವಿಲ್ಲ.

ಆದರೆ ಈ ಚಿರತೆಗೆ ಈ ವಿಶೇಷ ಬಣ್ಣ ಬಂದದ್ದಾದರೂ ಹೇಗೆ? ಇದಕ್ಕೆ ಮೂಲ ಕಾರಣ ಚಿರತೆಯಲ್ಲಿನ ಆನುವಂಶಿಕ ಬದಲಾವಣೆ. ಈ ಬದಲಾವಣೆಯಿಂದ ಚಿರತೆಯ ಚರ್ಮದಲ್ಲಿ ಅತಿಯಾದ ಕೆಂಪು ವರ್ಣದ ಉತ್ಪಾದನೆ ಅಥವಾ ಗಾಢವರ್ಣದ ಕೊರತೆಯಿಂದ ಈ ಬಣ್ಣ ಉಂಟಾಗುತ್ತದೆ. ಚಿರತೆಯಲ್ಲಿ ಈ ಬಣ್ಣ 'ಹೈಪೊಮೆಲನಿಸಮ್' (hypomelanism) ಅಥವಾ 'ಎರಿತ್ರಿಸಮ್' (erythrism) ಎನ್ನುವ ಆನುವಂಶಿಕ ಸ್ಥಿತಿಯಿಂದ ಉಂಟಾಗುತ್ತದೆ. ಪ್ರಸ್ತುತ, ಈ ಚಿರತೆಯ ಸ್ಥಿತಿಯನ್ನು, ಛಾಯಾಚಿತ್ರ ಮತ್ತು ಬಣ್ಣಗಳ ವೈಶಿಷ್ಟ್ಯಗಳ ಆಧಾರದ ಮೇಲೆ ದೃಢೀಕರಿಸಲಾಗಿದೆ. ಈ ಲಕ್ಷಣಗಳು ವಿಶಿಷ್ಟವಾಗಿದ್ದರೂ, ನಿಖರವಾದ ಆನುವಂಶಿಕ ಬದಲಾವಣೆಯನ್ನು ದೃಢೀಕರಿಸಲು ಅವುಗಳ ಹಿಕ್ಕೆ ಅಥವಾ ಕೂದಲುಗಳಿಂದ ಆನುವಂಶಿಕ ಮಾದರಿಗಳನ್ನು ಸಂಗ್ರಹಿಸಿ, ಅಧ್ಯಯನ ನಡೆಸುವ ಅಗತ್ಯವಿದೆ. ಇಂತಹ ಆನುವಂಶಿಕ ಸಾಕ್ಷ್ಯಗಳು ಲಭ್ಯವಾಗುವವರೆಗೆ, ಈ ಪ್ರಾಣಿಯನ್ನು ನಿರ್ದಿಷ್ಟ ಆನುವಂಶಿಕ ವಿಧಕ್ಕೆ ('ಹೈಪೊಮೆಲನಿಸಮ್' ಅಥವಾ 'ಎರಿತ್ರಿಸಮ್') ಸೇರಿಸುವ ಬದಲು ವಿರಳವಾದ ಬಣ್ಣದ ರೂಪಾಂತರವೆಂದು ವೈಜ್ಞಾನಿಕವಾಗಿ ವಿವರಿಸುವುದು ಸೂಕ್ತ.

ಹಾಗಾಗಿ ಇದರ ಮೂಲ ಹುಡುಕಲು ವಿಜಯನಗರ ಜಿಲ್ಲೆಗೆ ಹಿಂದಿರುಗಿದೆ. ಈಗ ಅದರ ಆನುವಂಶಿಕ ಮಾದರಿಗಳನ್ನು (ಕೂದಲು ಅಥವಾ ಮಲ) ಕಲೆ ಹಾಕಲು ಪ್ರಯತ್ನಿಸುತ್ತಿದ್ದೇವೆ. ಹಲವು ಚಿರತೆಗಳಿರುವ ಈ ಪ್ರದೇಶದಲ್ಲಿ ಇದರದೇ ಮಲ ಅಥವಾ ಕೂದಲು ಸಿಗುವುದು ಬಹು ಕಷ್ಟ. ಕಾಡಿನಲ್ಲಿ ತಿರುಗಿ ಸಿಗುವ ಚಿರತೆಗಳ ಮಲವನ್ನು ಸಂಗ್ರಹಿಸುತ್ತಿದ್ದೇವೆ. ಚಂದನ ಚಿರತೆ ಹೆಚ್ಚಾಗಿ ನಮ್ಮ ಕ್ಯಾಮೆರಾ ಟ್ರ್ಯಾಪ್‌ಗಳಲ್ಲಿ ಸಿಕ್ಕಿರುವ ಸ್ಥಳಗಳಲ್ಲಿ ಗಳಗಳನ್ನು ಹೂತು ಅವುಗಳಿಗೆ ಚಂದನ ಚಿರತೆ ಮೈ ಉಜ್ಜಿಕೊಂಡು ತನ್ನ ಕೂದಲನ್ನು ದಾನ ಮಾಡುತ್ತದೆ ಎಂಬ ಆಶಾ ಭಾವನೆಯಲ್ಲಿದ್ದೇನೆ. ಚಂದನ ಚಿರತೆಯ ಮಲ ಅಥವಾ ಕೂದಲು ದೊರೆತರೆ ಅದನ್ನು ವಿಶ್ಲೇಷಿಸಿ ಈ ಚಿರತೆ ಯಾವ ನಿರ್ದಿಷ್ಟ ಆನುವಂಶಿಕ ವಿಧಕ್ಕೆ (ಹೈಪೊಮೆಲನಿಸಮ್ ಅಥವಾ ಎರಿತ್ರಿಸಮ್) ಸೇರಿದೆ ಎಂದು ಕಂಡುಕೊಳ್ಳಬಹುದು.

ಪ್ರಪಂಚದಲ್ಲಿ ಸಾಮಾನ್ಯ ಬಣ್ಣದ ಚಿರತೆ, ಕಪ್ಪು ಚಿರತೆ ಮತ್ತು ಚಂದನ ಚಿರತೆ ಎಂಬ ಮೂರು ಬಣ್ಣದ ತುಪ್ಪಳವಿರುವ ಚಿರತೆಗಳು ಕಂಡುಬರುತ್ತವೆ. ಇವುಗಳಲ್ಲಿ ಅತೀ ವಿರಳವಾದುದು ಚಂದನ ಚಿರತೆ. ಈ ತರಹದ ಇನ್ನೆಷ್ಟು ಸುಂದರ ಗುಟ್ಟುಗಳನ್ನು ಈ ಕಾಡುಗಳು ಹುದುಗಿಸಿ ಇಟ್ಟು ಕೊಂಡಿವೆಯೋ ಏನೋ? ವನ್ಯಜೀವಿಗಳ ಈ ಗುಟ್ಟುಗಳನ್ನು ಹೆಚ್ಚು ವೈಜ್ಞಾನಿಕ ಅಧ್ಯಯನಗಳ ಮೂಲಕ ಕಂಡುಕೊಳ್ಳಬಹುದು. ಆದರೆ ಕೆಲ ಗುಟ್ಟುಗಳು ಹಾಗೆಯೇ ಉಳಿಯುವುದು ಉತ್ತಮವೇನೋ. ನಾವುಗಳು ವೈಜ್ಞಾನಿಕ ಅಧ್ಯಯನಗಳನ್ನು ಮಾಡಿದರಷ್ಟೇ ಸಾಲದು, ಅವುಗಳ ಸಂರಕ್ಷಣೆಗೆ ಕೂಡ ಒತ್ತು ಕೊಡಬೇಕು.

ಚಂದನ ಚಿರತೆಯ ಬಣ್ಣ ವಿಶೇಷವಾದರೂ ಇದಕ್ಕೆ ಇನ್ನೊಂದು ಮುಖವಿದೆ. ಈ ಬಣ್ಣ ಹೊಂದಿರುವ ಚಿರತೆಗಳು ಬಹುಶಃ ಅಂತಸ್ಸಂಬಂಧ ಹೊಂದಿರುವ ಸಾಧ್ಯತೆಗಳಿವೆ. ಚಿರತೆಗಳ ನೈಸರ್ಗಿಕ ಆವಾಸಸ್ಥಾನಗಳು ಛಿದ್ರೀಕರಣಗೊಂಡ ಹಾಗೆ ಅವುಗಳ ಸಂಖ್ಯೆ ಕೂಡ ವಿಭಜಿಸುತ್ತಿವೆ. ಇದರಿಂದ ಇವುಗಳ ಅನುವಂಶಿಕದ ಮೇಲೆ ಪರಿಣಾಮ ಬೀರಿ ಇವುಗಳ ತುಪ್ಪಳದ ಬಣ್ಣ ಬದಲಾಗುವ ಸಾಧ್ಯತೆಯಿದೆ ಎಂದು ಕೂಡ ವಿಶ್ಲೇಷಿಸಲಾಗಿದೆ.

ನಮ್ಮ ಮೈದಾನ ಪ್ರದೇಶಗಳ ಒಣ ಕಾಡುಗಳು ಹೆಚ್ಚಾಗಿ ಉಳಿದಿರುವುದು ಬೆಟ್ಟಗುಡ್ಡಗಳಲ್ಲಿ. ಕಾಡಿನ ಪ್ರಮಾಣ ಕಡಿಮೆಯಾದರೂ ಅವುಗಳ ಮೇಲಿರುವ ಒತ್ತಡಗಳು ಅಪಾರ. ಇತ್ತೀಚಿನ ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಜಿಲ್ಲೆಗಳ ಬೆಟ್ಟಗುಡ್ಡಗಳ ನೆತ್ತಿಯಲ್ಲಿ ಅಪಾರ ಸಂಖ್ಯೆಯಲ್ಲಿ ಗಾಳಿಯಂತ್ರಗಳನ್ನು ಅಳವಡಿಸಲಾಗಿದೆ. ಏರುತ್ತಿರುವ ಜನಸಂಖ್ಯೆ, ಹೆಚ್ಚುತ್ತಿರುವ ಆರ್ಥಿಕ ಸ್ಥಿತಿ, ಅದಕ್ಕೆ ಸರಿಸಮನಾಗಿ ಎಲ್ಲಾ ವಿಚಾರಗಳಲ್ಲೂ ಹೆಚ್ಚುತ್ತಿರುವ ಬೇಡಿಕೆಯೊಟ್ಟಿಗೆ ಹೆಜ್ಜೆ ಹಾಕಬೇಕಾಗಿರುವುದರಿಂದ ವಿದ್ಯುತ್ ಉತ್ಪಾದನೆಗಾಗಿ ರಾಜ್ಯದ ಹಲವಾರು ಬೆಟ್ಟಗುಡ್ಡ ಪ್ರದೇಶಗಳಲ್ಲಿ ಗಾಳಿಯಂತ್ರಗಳನ್ನು ಅಳವಡಿಸಲಾಗಿದೆ. ಅವುಗಳಿಗೋಸ್ಕರ ಬೆಟ್ಟಗುಡ್ಡಗಳನ್ನು ಕಡಿದು ನೂರಾರು ಕಿಲೋಮೀಟರುಗಳ ರಸ್ತೆಗಳನ್ನು ನಿರ್ಮಿಸಲಾಗಿದೆ. ಆ ಹೊಸ ರಸ್ತೆಗಳು ಆಕ್ರಮಣಕಾರಿ, ವಿದೇಶಿ ಸಸ್ಯ ಪ್ರಭೇದಗಳನ್ನು ತಂದಿವೆ, ಮತ್ತು ಚಿರತೆಗಳ ಬಲಿ ಪ್ರಾಣಿಗಳ ಬೇಟೆಯನ್ನು ಉತ್ತೇಜಿಸಿದೆ. ಈ ಕಳ್ಳ ಬೇಟೆ ಮುಂದುವರಿದರೆ ಈ ಪ್ರದೇಶಗಳಲ್ಲಿ ಮುಂದಿನ ದಿನಗಳಲ್ಲಿ ಮಾನವ ಚಿರತೆ ಸಂಘರ್ಷ ಏರುವ ಪರಿಸ್ಥಿತಿಯೇ ಹೆಚ್ಚು.

ಈ ಒಣ ಪ್ರದೇಶಗಳು ಚಂದನ ಚಿರತೆಯಲ್ಲದೆ ತೋಳ, ಕತ್ತೆಕಿರುಬ, ಕಪ್ಪಲು ನರಿ, ಕೊಂಡು ಕುರಿ, ಸಣ್ಣ ಹುಲ್ಲೆ, ಇನ್ನಿತರ ಹಲವು ದೊಡ್ಡ ಸ್ತನಿಗಳಿಗೆ ಆವಾಸಸ್ಥಾನವಾಗಿವೆ. ಕಡಿಮೆ ಮಳೆಯಾಗುವ ಕಲ್ಯಾಣ ಕರ್ನಾಟಕದ ಹಲವಾರು ಕೆರೆಕುಂಟೆಗಳಿಗೆ ಈ ಕಾಡುಗಳು ನೀರಿನ ಮೂಲವಾಗಿವೆ. ಇವುಗಳನ್ನು ಸಂರಕ್ಷಿಸುವುದು ಸರ್ಕಾರ, ವನ್ಯಜೀವಿ ಆಸಕ್ತರ ಕರ್ತವ್ಯವಾಗಿದೆ. ಚಂದನ ಚಿರತೆಯಂತಹ ಇನ್ನು ಯಾವ ರಹಸ್ಯಗಳನ್ನು ಈ ಪ್ರದೇಶ ಅಡಗಿಸಿಕೊಂಡಿದೆಯೋ ಯಾರು ಬಲ್ಲರು? ಈ ಒಣ ಕಾಡುಗಳು ನಾಶವಾದರೆ ನಿಸರ್ಗದ ಕೌತುಕಗಳು ಯಾರಿಗೂ ತಿಳಿಯದ ಹಾಗೆ ಅಳಿಸಿ ಹೋಗಿ ಬಿಡುತ್ತವೆ.



ವಿಜಯನಗರ ಜಿಲ್ಲೆಯಲ್ಲಿ ಮರಿಯೊಂದಿಗೆ ಕ್ಯಾಟ್ ವಾಕ್ ಮಾಡಿದ ಚಂದನ ಚಿರತೆ.
ಚಿತ್ರ: ಹೊಳೆಮತ್ತಿ ನೇಚರ್ ಫೌಂಡೇಶನ್

ಪ್ರತಿಕ್ರಿಯಿಸಿ: feedback@sudha.co.in